ಒ ಎಸ್ 206-2016

ಪಿಡಬ್ಲ್ಯೂ- 1

(ದಿನಾಂಕ 13-03-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ 2 ರ ಪರ ಶ್ರೀ ಎಸ್. ಎಮ್. ಎಸ್. ವಕೀಲರಿಂದಃ-**

ದಾವೆಯನ್ನು 9 ಜನಗಳ ಮೇಲೆ ಹಾಕಿರುತ್ತೇನೆ. ಅವರು ಪ್ರತಿವಾದಿಗಳು ಆಗಿರುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರ್ 227/ಬಿ ಆಗಿದ್ದು ಅದರ ವಿಸ್ತೀರ್ಣ 2 ಎಕರೆ 4 ಸೆಂಟ್ಸ್ ಆಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ಕರೆ ಕೊಟ್ರಯ್ಯ, ಉತ್ತರಕ್ಕೆ ಎಸ್.ಎಂ. ಕೊಟ್ರೇಶ, ದಕ್ಷಿಣಕ್ಕೆ ರಸ್ತೆ ಇದ್ದಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಕಾಲುವೆ ಇಲ್ಲ ಪ್ರತಿವಾದಿಗಳ ಸರ್ವೆ ನಂಬರ್ 227/ಬಿ ಇದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂದಪಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 227/ಬಿ ಯು ಮೂಲತಃ 4 ಎಕೆ 9 ಸೆಂಟ್ಸ್ ಇತ್ತು ಎಂದರೆ ಸರಿ. ಸದರಿ ಆಸ್ತಿ ಮೂಲತಃ ಕೆ.ಕೆ.ಬಿ.ಎಂ.ಮಲ್ಲಪ್ಪಯ್ಯ ನವರಿಗೆ ಸೇರಿದ್ದು ಎಂದರೆ ಸಾಕ್ಷಿಯು ನನ್ನ ಮಾವನದ್ದು ಆಗಿತ್ತು ಎಂದು ಹೇಳಿರುತ್ತಾರೆ. ಅದಕ್ಕೆ ಸಂಬಂದಪಟ್ಟಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆ.ಕೆ.ಬಿ.ಎಂ.ಮಲ್ಲಪ್ಪಯ್ಯನವರನ್ನು ನೋಡಿರುವುದಿಲ್ಲ. ಅವರಿಗೆ ರಂಗಮ್ಮ ಮತ್ತು ಈರಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ರಂಗಮ್ಮನಿಗೆ ಗೌರಮ್ಮ ಎಂಬ ಮಗಳು ಇದ್ದಳು ಎಂದರೆ ಸರಿ. ಗೌರಮ್ಮ 2ನೇ ಪ್ರತಿವಾದಿಯ ತಾಯಿ ಎಂದರೆ ಸರಿ. ಪ್ರತಿವಾದಿ 4 ರಿಂದ 9 ರವರು ಮಲ್ಲಪ್ಪಯ್ಯ ಮತ್ತು ಈರಮ್ಮನ ಮಕ್ಕಳು ಎಂದರೆ ಸರಿ. 3ನೇ ಪ್ರತಿವಾದಿಯ ಗಂಡನ ಹೆಸರು ಕೆ.ಕೆ.ಬಿ.ಎಂ.ಸ್ಕಂದಮೂರ್ತಿ ಎಂದರೆ ಸರಿ. ಕೆ.ಕೆ.ಬಿ.ಎಂ.ಸ್ಕಂದಮೂರ್ತಿ ತನ್ನ ಜೀವಿತಾವಧಿಯಲ್ಲಿ 2 ಎಕರೆ 5 ಸೆಂಟ್ಸ್‌ನ್ನು ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದನು ಎಂದರೆ ಸರಿ. ಇನ್ನೂಳಿದ 4 ಎಕರೆ 2 ಸೆಂಟ್ಸ್‌ನ್ನು ಕೆ.ಕೆ.ಬಿ.ಎಂ.ಮಲ್ಲಪ್ಪಯ್ಯನ ಹೆಸರಿನಲ್ಲಿ ಇದ್ದು ಅವರು ಸಾಗು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ನನ್ನ ಮಾವನವರಿಗೆ ಸೇರಿದ್ದು ಆಗಿರುತ್ತದೆ ಎಂದು ಹೇಳಿರುತ್ತಾರೆ. ಕೆ.ಕೆ.ಬಿ.ಎಂ.ಮಲ್ಲಪ್ಪಯ್ಯ ಮರಣ ಹೊಂದುವ ವರೆಗೂ ಆತನೇ ಸ್ವಾಧೀನದಲ್ಲಿ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಕೆ.ಕೆ.ಬಿ.ಎಂ.ಮಲ್ಲಪ್ಪಯ್ಯನ 1988 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ಆಗ

ನನಗೆ ಮದುವೆ ಆಗಿರುವುದಿಲ್ಲ, ನನಗೆ ಗೊತ್ತಿಲ್ಲ. 4 ರಿಂದ 9 ನೇ ಪ್ರತಿವಾದಿಗಳ ತಾಯಿಯಾದ ಈರಮ್ಮ 1987 ರಲ್ಲಿ ಮರಣ ಹೊಂದಿರುವ ವಿಷಯ ನನಗೆ ಗೊತ್ತಿಲ್ಲ. ಗೌರಮ್ಮನ ತಾಯಿಯಾದ ರಂಗಮ್ಮನನ್ನು ನಾನು ನೋಡಿರುತ್ತೇನೆ. ಅವರು 1991 ರಲ್ಲಿ ಮರಣ ಹೊಂದಿರುವ ವಿಷಯ ನನಗೆ ಗೊತ್ತಿಲ್ಲ. ಮಲ್ಲಪ್ಪಯ್ಯ ಮರಣದ ನಂತರ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದರ ಬಗ್ಗೆ ನನಗೆ ಗೊತ್ತಿಲ್ಲ. 2 ಎಕರೆ 5 ಸೆಂಟ್ಸ್‌ಗಳನ್ನು ಸ್ಕಂದಮೂರ್ತಿಯು ಗೌರಮ್ಮನ ಹೆಸರಿಗೆ ಹಕ್ಕು ಬಿಡುಗಡೆ ಪತ್ರ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂದಪಟ್ಟಂತೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಎಕರೆ 5 ಸೆಂಟ್ಸ್‌ನಲ್ಲಿ ಹಕ್ಕು ಬಿಡುಗಡೆ ಯಂತೆ ಗೌರಮ್ಮ ಸ್ವಾಧೀನದಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಗೌರಮ್ಮ 18.08.2012 ರಲ್ಲಿ ಮರಣ ಹೊಂದಿರುವ ವಿಷಯ ನನಗೆ ಗೊತ್ತಿಲ್ಲ.

ಪ್ರತಿವಾದಿ 2 ರ ವಕೀಲರ ಮನವಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,
ಹಗರಿಬೊಮ್ಮನಹಳ್ಳಿ.